**(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 27/09/2024 )**

**ಮುಖ್ಯ ವಿಚಾರಣೆ : ಪ್ರತಿವಾದಿ ಪರ ಶ್ರೀ ಎಮ್ ಎಲ್ ಎನ್ ವಕೀಲರಿಂದ,**

ನನ್ನ ಸಾಕ್ಷಿ ಪ್ರಮಾಣಪತ್ರವನ್ನು ದಾಖಲಿಸಿದ್ದು ಅದನ್ನು ನಾನು ಓದಿ ನೋಡಿ ಸಹಿ ಮಾಡಿರುತ್ತೇನೆ. ಅದರಲ್ಲಿ ಬರೆದ ಎಲ್ಲಾ ವಿಷಯಗಳು ನಿಜ ಇರುತ್ತವೆ.

**ಪಾಟೀ ಸವಾಲು: ವಾದಿ ಪರ ಶ್ರೀ ಜೆ ಡಿ ಬಿ ವಕೀಲರಿಂದ.**

ಈ ದಾವೆಯನ್ನು ಯಾರು ಯಾರ ಮೇಲೆ ದಾಖಲಿಸಿರುತ್ತಾರೆ ಎಂದು ಗೊತ್ತು. ಲೋನಾ ಅಶ್ರಫ್ ರವರು ಅಬ್ದುಲ್ ಸತ್ತಾರರವರ ವಿರುದ್ಧ ಈ ದಾವೆಯನ್ನು ದಾಖಲಿಸಿರುತ್ತಾರೆ. ಈ ದಾವೆಯನ್ನು ಅಂಗಡಿ ತನ್ನದು ಎಂದು ಹೇಳಿ ಲೋನಾ ಅಶ್ರಫ್ ರವರು ದಾಖಲಿಸಿರುತ್ತಾರೆ. ನನ್ನ ಮನೆ ಚೌಥನಿಯಲ್ಲಿರುತ್ತದೆ. ಈ ದಾವೆಯಲ್ಲಿ ಹೇಳಿರುವಂತಹ ಕಟ್ಟಡದಿಂದ ನನ್ನ ಮನೆ ಒಂದುವರೆ ಕಿಲೋ ಮೀಟರ್ ದೂರದಲ್ಲಿರುತ್ತದೆ. ದಾವಾ ಕಟ್ಟಡದ ಸುತ್ತಮುತ್ತ ನನಗೆ ಸೇರಿದ ಯಾವುದೇ ಆಸ್ತಿ ಇರುವುದಿಲ್ಲ. ನನ್ನ ಮನೆ ಇರುವ ಜಾಗದ ಸರ್ವೆ ನಂಬರ ನನಗೆ ಗೊತ್ತಿಲ್ಲ. ದಾವಾ ಕಟ್ಟಡ ಇರುವ ಜಾಗದ ಸರ್ವೇ ನಂಬರ 88 ಆಗಿರುತ್ತದೆ. ನಾನು ದಾವಾ ಕಟ್ಟಡಕ್ಕೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು 2000 ನೇ ಇಸವಿಯಲ್ಲಿ ನೋಡಿರುತ್ತೇನೆ. ದಾವಾ ಕಟ್ಟಡವನ್ನು ನಾನು ಕಟ್ಟಿಸಿಕೊಟ್ಟಿರುತ್ತೇನೆ. ದಾವಾ ಕಟ್ಟಡವನ್ನು ಕಟ್ಟಡಲು ನನಗೆ ಪರವಾನಿಗೆಯನ್ನು ನೀಡಿರುವುದಿಲ್ಲ. ಅದು ಅತಿಕ್ರಮಣ ಜಾಗದಲ್ಲಿರುತ್ತದೆ. ಸರ್ವೇ ನಂಬರ 88 ರಲ್ಲಿ ಎಷ್ಟು ಕ್ಷೇತ್ರ ಜಾಗ ಇದೆ ಎಂಬ ಪ್ರಶ್ನೆಗೆ ಸಾಕ್ಷಿಯು 3 ರಿಂದ 4 ಗುಂಟೆ ಜಾಗ ಇರುತ್ತದೆ ಎಂದು ಉತ್ತರಿಸಿರುತ್ತಾರೆ. ನಾನು ಈ ಮೇಲೆ ಹೇಳಿದಂತೆ ನೋಡಿದ ಪಹಣಿ ಪತ್ರಿಕೆಯಲ್ಲಿಯೂ ಸಹ ಸರ್ವೇ ನಂಬರ 88 ರಲ್ಲಿ 3 ರಿಂದ 4 ಗುಂಟೆ ಮಾತ್ರ ಜಾಗ ಇತ್ತು. ನಾನು ಹೇಳುವಂತೆ ದಾವಾ ಕಟ್ಟಡದ ಪೂರ್ವದಲ್ಲಿ ವಾದಿಯವರ ಮನೆ ಇರುತ್ತದೆ. ಪಶ್ಚಿಮಕ್ಕೆ ರಾಷ್ಟ್ರೀಯ ಹೆದ್ದಾರಿ ಇರುತ್ತದೆ. ದಕ್ಷಿಣ ಮತ್ತು ಉತ್ತರಕ್ಕೆ ಖಾಲಿ ಜಾಗ ಇರುತ್ತದೆ. ಸಾಮಾನ್ಯವಾಗಿ ಅತಿಕ್ರಮಣ ಮಾಡಿದ ಜಾಗದಲ್ಲಿ ಕಟ್ಟಡ ಕಟ್ಟಬಾರದು ಎಂಬ ಬಗ್ಗೆ ಗೊತ್ತಿರುತ್ತದೆ. ನಾನು ಕಟ್ಟಡ ಕಟ್ಟುವ ಪರವಾನಿಗೆಯನ್ನು ಸಧ್ಯಕ್ಕೆ ಪಡೆದುಕೊಂಡಿರುತ್ತೇನೆ. ಈ ಮೊದಲು ನನ್ನ ಬಳಿ ಪರವಾನಿಗೆ ಇರಲಿಲ್ಲ. ನಾನು ಈ ಮೇಲೆ ಹೇಳಿದಂತೆ ದಾವಾ ಕಟ್ಟಡದ ಕಟ್ಟಿದ ಸಮಯದಲ್ಲಿ ಮೇಸ್ತ್ರಿಯಾಗಿ ಕೆಲಸ ಮಾಡಿರುತ್ತೇನೆ. ನನಗೆ ಕಟ್ಟಡ ಕಟ್ಟಲು ಗುತ್ತಿಗೆ ನೀಡಿರುವುದಿಲ್ಲ.

2. 2000 ನೇ ಇಸವಿಯಲ್ಲಿ ದಾವಾ ಕಟ್ಟಡ ಇದ್ದ ಜಾಗದಲ್ಲಿ ಶೀಟ್ ಹಾಕಿದ ಒಂದು ಅಂಗಡಿ ಕಟ್ಟಡ ಇತ್ತು. ಅದನ್ನು ಯಾರು ಕಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ಸದ್ರಿ ಅಂಗಡಿಯಲ್ಲಿ

ಪ್ರತಿವಾದಿಯವರ ತಂದೆ ಅಬ್ದುಲ್ ಗಫಾರ್ ಶೇಖ್ ರವರು ಇದ್ದರು. ಸದ್ರಿ ಕಟ್ಟಡಕ್ಕೆ ನಂಬರ ಇರಲಿಲ್ಲ. ದಾವಾ ಕಟ್ಟಡದಲ್ಲಿ ನಾಲ್ಕು ಅಂಗಡಿಗಳು ಇರುತ್ತವೆ. ಕೊನೆಯ ಬಾರಿ ದಾವಾ ಕಟ್ಟಡದ ಬಳಿ ಎರಡು ತಿಂಗಳ ಹಿಂದೆ ಹೋಗಿರುತ್ತೇನೆ. ದಾವಾ ಕಟ್ಟಡದಲ್ಲಿರುವ ನಾಲ್ಕು ಅಂಗಡಿಗಳಲ್ಲೂ ಪ್ರತಿವಾದಿಯವರೇ ಇರುತ್ತಾರೆ. ದಾವಾ ಕಟ್ಟಡಕ್ಕೆ ಸಂಬಂಧಿಸಿದಂತೆ ಅದು ಯಾರ ಹೆಸರಿನಲ್ಲಿರುತ್ತದೆ ಎಂಬ ದಾಖಲಾತಿಗಳ ಕುರಿತು ನಾನು ನೋಡಿರುವುದಿಲ್ಲ. ನಾನು ಈ ಮೇಲೆ ಹೇಳಿದಂತೆ ಪಹಣಿ ಪತ್ರಿಕೆಯನ್ನು ನೋಡಿದಾಗ ಸರ್ವೇ ನಂಬರ 88 ರಲ್ಲಿ ಕಟ್ಟಡ ಇದ್ದ ಬಗ್ಗೆ ಉಲ್ಲೇಖ ಇತ್ತಾ ಎಂಬ ಪ್ರಶ್ನೆಗೆ ಸಾಕ್ಷಿಯು ಈಗ ನೆನಪಿಲ್ಲ ಎಂದು ಉತ್ತರಿಸಿರುತ್ತಾರೆ. ನಾನು ಹೇಳುವಂತೆ 2000 ನೇ ಇಸವಿಯಲ್ಲಿ ದಾವಾ ಕಟ್ಟಡವನ್ನು ನೋಡಿದಾಗ ಅದಕ್ಕೆ ವಿದ್ಯುತ್ ಸಂಪರ್ಕ ಇರಲಿಲ್ಲ. ನಾನು ಹೇಳುವಂತೆ 2000 ನೇ ಇಸವಿಯಲ್ಲಿ ದಾವಾ ಕಟ್ಟಡವನ್ನು ದಿನಗೂಲಿಯ ಆಧಾರದಲ್ಲಿ ಕಟ್ಟಿರುತ್ತೇವೆ. ಆಗ ನಾವು ಒಟ್ಟು ಆರು ಜನ ಕೆಲಸಗಾರರು ಇದ್ದೆವು. ಎಲ್ಲಾ ಕೆಲಸಗಾರರು ಸಹ ದಿನಗೂಲಿಯ ಆಧಾರದಲ್ಲಿ ಕೆಲಸ ಮಾಡಿರುತ್ತಾರೆ. ದಾವಾ ಕಟ್ಟಡಕ್ಕೆ ಸೆಂಟ್ರಿಂಗ್ ಕೆಲಸವನ್ನು ನಾವೇ ಆರು ಜನ ಮಾಡಿರುತ್ತೇವೆ. ಅದರ ಮೇಲೆ ಕಾಂಕ್ರೀಟ್ ಹಾಕಲು ಬೇರೆ ಜನ ಬಂದಿರುತ್ತಾರೆ. ಅವರು ಯಾರೆಂದು ನನಗೆ ಗೊತ್ತಿಲ್ಲ. ಕಟ್ಟಡದ ಗಾರೆ ಕೆಲಸವನ್ನು ನಾನು ಮಾಡಿರುವುದಿಲ್ಲ ಆದರೆ ನಮ್ಮ ಜನ ಮಾಡಿರುತ್ತಾರೆ. ಆ ರೀತಿ ಗಾರೆ ಕೆಲಸವನ್ನು ನಾರಾಯಣ ಎಂಬವರು ಮಾಡಿರುತ್ತಾರೆ. ಅವರು ಈಗ ಬದುಕಿರುವುದಿಲ್ಲ. ನಾನು ಸ್ವತಃ ಕಟ್ಟಡದ ಗುತ್ತಿಗೆಯನ್ನು ಪಡೆದು ಕಟ್ಟಡವನ್ನು ಕಟ್ಟಿರುವುದಿಲ್ಲ.

3. ಪ್ರತಿವಾದಿಯವರು 2000 ನೇ ಇಸವಿಯಿಂದ ನನಗೆ ಪರಿಚಿತರು. ಪ್ರತಿವಾದಿಯವರ ಬೇರೆ ಕಟ್ಟಡದ ಕೆಲಸವನ್ನು ನಾನು ಮಾಡಿರುವುದಿಲ್ಲ. ವಾದಿಯವರನ್ನು ನಾನು ನೋಡಿರುತ್ತೇನೆ. ಅವರ ವಯಸ್ಸು ಅಂದಾಜು 65 ಆಗಿರಬಹುದು. ವಾದಿಯವರ ಮನೆಯ ಮುಖವು ಪಶ್ಚಿಮ ದಿಕ್ಕಿಗೆ ಬರುತ್ತದೆ. ವಾದಿಯವರ ಮನೆಯಿಂದ ದಾವಾ ಕಟ್ಟಡಕ್ಕೆ 20 ರಿಂದ 25 ಫೂಟ್ ಅಂತರ ಇರಬಹುದು. ದಾವಾ ಕಟ್ಟಡದ ವಿಸ್ತೀರ್ಣ ಅಂದಾಜು 50 ಫೂಟ್ ಆಗಿರಬಹುದು. ನನಗೆ ದಾವಾ ಕಟ್ಟಡದ ಮಾಹಿತಿಯಾಗಲೀ ಮತ್ತು ವಸ್ತುಸ್ಥಿತಿಯಾಗಲೀ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಮೇಸ್ತ್ರಿ ಕೆಲಸ ಮಾಡುವವನು ಅಲ್ಲ ಹಾಗೆ ಕಟ್ಟಡ ಕಟ್ಟುವವನು ಅಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಪ್ರತಿವಾದಿಯವರು ಸ್ನೇಹಿತರಾಗಿದ್ದು, ಪ್ರತಿವಾದಿಯವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಪ್ರಮಾಣ ಪತ್ರವನ್ನು ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ್, ಭಟ್ಕಳ.**